ಬಹುರಾಷ್ಟ್ರೀಯ ಕಂಪೆನಿಯಲ್ಲಿ ಕೆಲಸಕ್ಕೂ ಸೇರಿಕೊಂಡರು. ಆದರೆ ಎಳವೆಯಲ್ಲಿಯೇ ಮೈ ಮನಸ್ಸುಗಳಿಗೆ ಅಂಟಿದ್ದ ನಟನೆಯ ಕಂಪು ಮಾಸಿರಲಿಲ್ಲ. ಬಣ್ಣದ ಲೋಕದ ತೀರದಿಂದ ತೇಲಿಬರುತ್ತಿದ್ದ ಕೊಳಲಿನ ಕರೆ ಮನಸ್ಸಿನ ದಡಕ್ಕೆ ಅಪ್ಪಳಿಸುತ್ತಲೇ ಇತ್ತು.

ಆಗಲೇ ಕಸ್ತೂರಿ ವಾಹಿನಿಯ 'ಚಕ್ರವ್ಯೂಹ' ಧಾರಾವಾಹಿಯಲ್ಲಿ ನಟಿಸುವ ಅವಕಾಶ ಬಂತು. ಅದು ಚೈತ್ರಾ ನಟನಾಪಯಣದ ಸೆಕೆಂಡ್ ಇನಿಂಗ್ಸ್. ಮೊದಲ ಇನಿಂಗ್ಸ್‌ನಷ್ಟೇ ಅಕ್ಕರೆಯಿಂದ ಈಗಲೂ ಬಣ್ಣದ ಲೋಕ ಅವರನ್ನು ಬರಮಾಡಿಕೊಂಡಿತು. 'ಚಕ್ರವ್ಯೂಹ' ಧಾರಾವಾಹಿ ಮುಗಿಯುತ್ತಿದ್ದಂತೆಯೇ ಉದಯ ವಾಹಿನಿಯಲ್ಲಿ ಇನ್ನೊಂದು ಧಾರಾವಾಹಿಯಲ್ಲಿ ನಟಿಸುವ ಅವಕಾಶ ಬಂತು. ಅದಾದ ಮೇಲೆ 'ಜೋಡಿ ಹಕ್ಕಿ' ಧಾರಾವಾಹಿಯಲ್ಲಿ ನಟಿಸಿದರು. ಈ ನಡುವೆ ದಿನಕ್ಕೆ ಒಂಬತ್ತು ಗಂಟೆ ಒಂದೇ ಕಡೆಯಲ್ಲಿ ಕೂತು ಕೀ ಪ್ಯಾಡ್ ಕುಟ್ಟುವ ಕೆಲಸ ಅಸಹನೀಯ ಅನ್ನಿಸಿ ರಾಜಿನಾಮೆ ಪತ್ರ ರವಾನಿಸಿ ಬಂದಿದ್ದೂ ಆಯಿತು.

ಕಿರುತೆರೆಯಿಂದ ಮತ್ತೆ ಹಿರಿತೆರೆಗೆ ಜಿಗಿಯಲು ಒಳ್ಳೆಯ ಅವಕಾಶಕ್ಕೆ ಕಾಯುತ್ತಿದ್ದ ಚೈತ್ರಾಗೆ ಪಿಆರ್‌ಕೆ ಪ್ರೊಡಕ್ಷನ್‌ನ 'ಮಾಯಾ ಬಜಾರ್'ನಲ್ಲಿ ನಟಿಸುವ ಅವಕಾಶ ಬಂತು. ಆ ಚಿತ್ರದಲ್ಲಿನ ನಟನೆಗೆ ಒಳ್ಳೆಯ ಪ್ರಶಂಸೆಯೂ ವ್ಯಕ್ತವಾಯಿತು. ಈಗ ಇನ್ನೆರಡು ಸಿನಿಮಾದಲ್ಲಿ ಮುಖ್ಯಪಾತ್ರದಲ್ಲಿ ಅವರು ನಟಿಸುತ್ತಿದ್ದಾರೆ.

'ಮಾಯಾಬಜಾರ್'ನಲ್ಲಿ ನಿರ್ದೇಶಕರು ಹೇಳಿದಷ್ಟನ್ನೇ ಮಾಡುತ್ತಿದ್ದೆ. ಈಗ 'ಟಾಮ್ ಆ್ಯಂಡ್ ಜೆರ್ರಿ' ಮತ್ತು 'ಅರಬ್ಬಿ' ಎಂಬ ಎರಡು ವಿಭಿನ್ನ ಚಿತ್ರಗಳಲ್ಲಿ ನಟಿಸುತ್ತಿದ್ದೇನೆ. ಎರಡೂ ಚಿತ್ರಗಳ ಸ್ಕ್ರಿಪ್ಟ್ ಓದಿಕೊಂಡು, ಪಾತ್ರದ ಕುರಿತು ನಿರ್ದೇಶಕರ ಬಳಿ ಚರ್ಚಿಸಿ ಸಿದ್ಧಗೊಂಡಿದ್ದೇನೆ' ಎಂದು ತಮ್ಮ ಪೂರ್ವತಯಾರಿಯ ಕುರಿತು ವಿವರಿಸುತ್ತಾರೆ.

'ನಾವು ಬದುಕಿನಲ್ಲಿ ಹೇಗಿರುತ್ತೇವೆಯೋ ಅದಕ್ಕಿಂತ ಭಿನ್ನವಾದ ಪಾತ್ರವೊಂದು, ಬೇರೆ ಬೇರೆ ಸನ್ನಿವೇಶಗಳಲ್ಲಿ ಹೇಗೆ ವರ್ತಿಸುತ್ತದೆ ಎಂಬುದನ್ನು ಕಲ್ಪಿಸಿಕೊಂಡು, ಆ ಪಾತ್ರವನ್ನು ಜೀವಿಸಲು ಸಾಧ್ಯವಿಲ್ಲದಿದ್ದರೆ ಅವರು ಒಳ್ಳೆಯ ನಟರಾಗುವುದು ಸಾಧ್ಯವಿಲ್ಲ' ಎಂದು ತಮ್ಮ ನಟನಾವ್ಯಾಖ್ಯಾನವನ್ನು ಹೇಳುವ ಚೈತ್ರಾ ಭರತನಾಟ್ಯ ಕಲಾವಿದೆಯೂ ಹೌದು.

'ಕಮರ್ಷಿಯಲ್ ಸಿನಿಮಾಗಳಲ್ಲಿನ ಟಿಪಿಕಲ್ ಹೀರೊಯಿನ್ ರೀತಿಯ ಮತ್ತೆ ಅತಿಯಾದ ಗ್ಲ್ಯಾಮರ್ ಆಗಿ ಕಾಣಿಸಿಕೊಳ್ಳುವ ಪಾತ್ರಗಳನ್ನು ಒಲ್ಲೆ' ಎಂದು ಸ್ಪಷ್ಟವಾಗಿ ಹೇಳುವ ಅವರು 'ಅಭಿನಯಪ್ರಧಾನವಾದ ಪಾತ್ರಗಳನ್ನೇ ನೆಚ್ಚಿಕೊಂಡು ಬೆಳೆಯುತ್ತೇನೆ' ಎಂಬ ವಿಶ್ವಾಸವನ್ನೂ ಹೊಂದಿದ್ದಾರೆ. ■



# ಭಟ್ಟರ ಕೊರೊನಾ ಕೋರಸ್

ಈಗ ಗಾಂಧಿನಗರದ ಯಾರನ್ನೇ ಮಾತನಾಡಿಸಿ, 'ಫ್ಯಾಮಿಲಿ ಜೊತೆಗೆ ಟೈಮ್ ಸ್ಪೆಂಡ್ ಮಾಡುತ್ತಿದ್ದೇನೆ' ಎಂಬ ಸಿದ್ಧ ಉತ್ತರ ಬರುತ್ತದೆ. ಆದರೆ ಯೋಗರಾಜ್ ಭಟ್ಟರನ್ನು ಮಾತನಾಡಿಸಿದರೆ ಸಿಗುವ ಉತ್ತರ ಕೊಂಚ ಭಿನ್ನ. 'ಶೂಟಿಂಗ್‌ನಲ್ಲಿ ಬ್ಯುಸಿ ಇದ್ದೇನೆ' ಎಂಬ ಎಂದಿನ ಉತ್ತರವನ್ನೇ ಅವರು ಲಾಕ್‌ಡೌನ್ ಸಮಯದಲ್ಲೂ ನೀಡುತ್ತಾರೆ. ಕಾರಣವಿಷ್ಟೆ, ಅವರು ಈಗಲೂ ಶೂಟಿಂಗ್‌ನಲ್ಲಿ ಬ್ಯೂಸಿ ಇದ್ದಾರೆ!

ಕೊರೊನಾ ಕಾರಣಕ್ಕೆ ಇಡೀ ಗಾಂಧಿನಗರವೇ ಶಟರ್ ಎಳೆದುಕೊಂಡು ಒಳಗೆ ತೆಪ್ಪಗೆ ಕೂತಿದ್ದಾಗ ಇವರದೇನು ಶೂಟಿಂಗು? ಅವರಿಗೆ ಪರ್ಮಿಷನ್ ಕೊಟ್ಟಿದ್ಯಾರು? ಕೊರೊನಾ ಭಯ ಅವರಿಗೆ ಇಲ್ಲವೇ? ಇತ್ಯಾದಿ ಇತ್ಯಾದಿ ಪ್ರಶ್ನೆಗಳೆಲ್ಲ ನಿಮ್ಮ ಮನಸಲ್ಲಿ ಈಗಾಗಲೇ ಎದ್ದಿರುತ್ತದೆ.

ಕೊರೊನಾ ಕಾರಣಕ್ಕೆ ಲಾಕ್‌ಡೌನ್ ಆಗಿರುವುದು ನಿಜ. ಹಾಗಾಗಿ ಯಾರೂ ಸಿನಿಮಾ ಚಿತ್ರೀಕರಣ ನಡೆಸಲು ಸಾಧ್ಯವಾಗುತ್ತಿಲ್ಲ. ಆದರೆ ಭಟ್ಟರು ಚಿತ್ರೀಕರಣ ಮಾಡುತ್ತಿರುವುದು ಸಿನಿಮಾವನ್ನಲ್ಲ, ಕೊರೊನಾ ಸಂದರ್ಭದಲ್ಲಿ ಪೊಲೀಸರು, ವೈದ್ಯರ ಕಾರ್ಯವೈಖರಿಯನ್ನೇ ಸಾಕ್ಷ್ಯಚಿತ್ರ ಮತ್ತು ವಿಡಿಯೊ ಆಲ್ಬಂ ರೂಪದಲ್ಲಿ ದಾಖಲಿಸುವ ಕೆಲಸದಲ್ಲಿ ಮಗ್ನರಾಗಿದ್ದಾರೆ. ಹಾ, ಇದಕ್ಕೆ ಬೆಂಗಳೂರು ನಗರ ಪೊಲೀಸ್ ಆಯುಕ್ತ ಭಾಸ್ಕರ್ ರಾವ್ ಅವರೇ ಅನುಮತಿ ನೀಡಿದ್ದಾರೆ. ಅಷ್ಟೇ ಅಲ್ಲ, ಭಟ್ಟರ ಸಾಕ್ಷ್ಯಚಿತ್ರದಲ್ಲಿ ಸಾಕ್ಷಾತ್ ಅವರು ಭಾಗವಹಿಸಿದ್ದಾರೆ ಕೂಡ.

ಬೆಂಗಳೂರಿನ ಟೌನ್‌ಹಾಲ್ ಎದುರು ಭಾಸ್ಕರ್ ರಾವ್ ಸೇರಿದಂತೆ ಹಲವು ಪೊಲೀಸರನ್ನು ಬಳಸಿಕೊಂಡು ಯೋಗರಾಜ್ ಭಟ್ ಚಿತ್ರೀಕರಣ ಮಾಡಿದ್ದಾರೆ. ಮುಖ್ಯಮಂತ್ರಿ ಯಡಿಯೂರಪ್ಪ, ಸುಧಾಮೂರ್ತಿ ಸೇರಿದಂತೆ ಹಲವು ಖ್ಯಾತನಾಮರು ಈ ಡಾಕ್ಯುಮೆಂಟರಿಯಲ್ಲಿ ಕಾಣಿಸಿಕೊಳ್ಳಲಿದ್ದಾರಂತೆ.

ಸದ್ಯದ ಅನಿಶ್ಚಿತ ವಾತಾವರಣದಲ್ಲಿ ಆತ್ಮವಿಶ್ವಾಸದ ಒರತೆ ಉಕ್ಕಿಸುವುದು ಈ ಆಲ್ಬಂನ ಉದ್ದೇಶವಂತೆ. ಇದಕ್ಕಾಗಿ ಪೊಲೀಸ್, ಡಾಕ್ಟರ್, ಬಿಬಿಎಂಪಿ ಕೆಲಸಗಾರರು ಸೇರಿದಂತೆ ಹಲವು ಕೊರೊನಾ ವಾರಿಯರ್ಸ್‌ಗಳ ಕಾರ್ಯವೈಖರಿಯನ್ನು ಸಾಕ್ಷ್ಯಚಿತ್ರದಲ್ಲಿ ದಾಖಲಿಸುತ್ತಿದ್ದಾರೆ. ಯೋಗರಾಜ್ ಭಟ್ ಅವರೇ ಬರೆದಿರುವ ಹಾಡಿಗೆ ಅರ್ಜುನ್ ಜನ್ಯ ಸಂಗೀತ ಸಂಯೋಜನೆ ಮಾಡಿದ್ದಾರೆ. ವಿಜಯ್ ಪ್ರಕಾಶ್ ಧ್ವನಿಯಾಗಲಿದ್ದಾರೆ.

ನೀವು ಈ ಸುದ್ದಿಯನ್ನು ಓದುವ ಹೊತ್ತಿಗೆ ಭಟ್ಟರ ಕೊರೊನಾ ಹಾಡು ಬಿಡುಗಡೆಯಾಗಿ ನೆಟ್ಟಿಗರು ಕೋರಸ್‌ನಲ್ಲಿ ಗುನುಗಲು ಶುರುಮಾಡಬಹುದು. ■